# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/492/2012-13 ದಿನಾಂಕ :25/08/ 2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಗಾದಿರಾಜು ಸತ್ಯನಾರಾಯಣರಾಜು ತಂದೆ ವೆಂಕಟರಾಜು,ಮಣ್ಣೂರು ಕ್ಯಾಂಪ್,ಮಣ್ಣೂರು ಅಂಚೆ, ಸಿರುಗುಪ್ಪ ತಾಲೂಕು (ಶ್ರೀಜೋಯಿಸ್ ಪ್ರಹಲ್ಲಾದ್, ವಕೀಲರು,ಬಳ್ಳಾರಿ) | 1.ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಮಣ್ಣೂರು | 246 | 3.05 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ ಇವರ ಎಂ.ಆರ್.ನಂ.98/2010-11 ದಿನಾಂಕ:16.06.2011 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 20.12.2013,24.02.2015,25.08.2016,ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ಮಣ್ಣೂರು ಗ್ರಾಮದ ಸ.ನಂ.246 ವಿಸ್ತೀರ್ಣ:3.05 ಎಕರೆ ಜಮೀನನ್ನು ಶ್ರೀಮತಿ.ಬಿ.ಹೆಚ್.ವರಲಕ್ಷ್ಮಿ ಬಾಲಕುಮಾರಿ ಗಂಡ ಬಿ.ಹೆಚ್.ವೆಂಕಟಪತಿರಾಜು ಇವರಿಂದ ಸದರಿ ಜಮೀನನ್ನು ನೊಂದಾಯಿತ ಕ್ರಯ ಪತ್ರ ಸಂಖ್ಯೆ 1541/2010-11 ದಿನಾಂಕ:06.12.2010 ರಂದು ಮನವಿದಾರರು ಕ್ರಯಕ್ಕೆ ಪಡೆದಿರುತ್ತಾರೆ. ಕ್ರಯ ಪತ್ರದಂತೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಲಾಗಿ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರು ಎಂ.ಆರ್.ನಂ.98/2010-11 ದಿನಾಂಕ:16.06.2011 ರಂದು ಜೆ-ನಮೂನೆಯಲ್ಲಿರುವ ಹಕ್ಕು ಬದಲಾವಣೆ ವಿವರ ಮತ್ತು ಲಗತ್ತು ದಸ್ತಾವೇಜಿನಲ್ಲಿರುವ ವಿವರಗಳು ಪರಸ್ಪರ ತಾಳೆ ಇರದ ಕಾರಣ ಹಕ್ಕು ಬದಲಾವಣೆ ಗೈರು ಮಂಜೂರು ಮಾಡಿರುತ್ತಾರೆ, ಮನಿದಾರರು ಸದರಿ ಗೈರು ಮಂಜೂರು ಆದೇಶವನ್ನು ಪ್ರಶ್ನಿಸುತ್ತಾ,ಗೈರು ಮಂಜೂರು ಆದೇಶವನ್ನು ರದ್ದು ಪಡಿಸಿ,ಕ್ರಯ ಪತ್ರದಂತೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯೊಂದಿಗೆ ಕ್ರಯಪತ್ರ,ಪಹಣಿ ಪರಿಶೀಲಿಸಲಾಗಿ ವಾದಿಗಳು ನಿಯಮನುಸಾರ ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ. ಕಾರಣ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ

ಹಕ್ಕು ಬದಲಾವಣೆ ಗೈರು ಮಂಜೂರು ಆದೇಶ ಎಂ.ನಂ.98/2010-11 ದಿನಾಂಕ:16.06.2011 ಆದೇಶವನ್ನು ರದ್ದುಗೊಳಿಸಿ, ಕ್ರಯ ಪತ್ರದಂತೆ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡವ ಈ ಕೆಳಕಂಡಂತೆ ಆದೇಶ.

:: **ಆದೇಶ** ::

**ವಾದಿಯ ಮೇಲ್ಮನವಿಯನ್ನು ಪುರಸ್ಕರಿಸಿದೆ:-**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಮಣ್ಣೂರು ಗ್ರಾಮದ 246 ವಿಸ್ತೀರ್ಣ: 3.05 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ ಎಂ.ನಂ.98/2010-11 ದಿನಾಂಕ:16.06.2011ರ ಆದೇಶವನ್ನು ರದ್ದುಗೊಳಿಸಿದೆ, ಕ್ರಯಪತ್ರದಂತೆ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 25.08.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.